All India Radio: Bangalore
National Bulletin In Kannada
07.09.2025  7.35 a.m.
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

<><><><>

ಮುಖ್ಯಾಂಶಗಳು

1. ಗಯಾನಾ ಅಧ್ಯಕ್ಷ ಇರ್ಫಾನ್ ಅಲಿ ಗೆಲುವಿಗೆ ಪ್ರಧಾನಿ ನರೇಂದ್ರ ಮೋದಿ ಅಭಿನಂದನೆ: ದ್ವಿಪಕ್ಷೀಯ ಸಂಬಂಧ ಬಲವರ್ಧನೆಯ ನಿರೀಕ್ಷೆ

2. ಆಪರೇಷನ್ ಸಿಂಧೂರ್‌ನಿಂದ ಭಾರತದ ನಿರ್ಣಾಯಕ ಮತ್ತು ನಿಖರ ದಾಳಿಯ ಸಾಮರ್ಥ್ಯ ಪ್ರದರ್ಶನ: ಏರ್ ಚೀಫ್ ಮಾರ್ಷಲ್ ಅಮರ್ ಪ್ರೀತ್ ಸಿಂಗ್

3. ಪರಿಷ್ಕೃತ ಜಿಎಸ್‌ಟಿ ದರಗಳಿಂದ ಕೃಷಿ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆ - ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ವಿಶ್ವಾಸ

4. ಏಷ್ಯಾಕಪ್ ಹಾಕಿ ಚಾಂಪಿಯನ್‌ಶಿಪ್: ಭಾರತದ ಪುರುಷರ ತಂಡ ಫೈನಲ್ ಪ್ರವೇಶ

<><><><><><><><>

ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಗಯಾನ ಅಧ್ಯಕ್ಷ ಇರ್ಫಾನ್ ಅಲಿ ಅವರಿಗೆ ಚುನಾವಣೆಗಳಲ್ಲಿ ಭರ್ಜರಿ ಗೆಲುವು ಸಾಧಿಸಿದ್ದಕ್ಕಾಗಿ ಅಭಿನಂದಿಸಿದ್ದಾರೆ. ಸಾಮಾಜಿಕ ಜಾಲತಾಣ ಸಂದೇಶದಲ್ಲಿ ಪ್ರಧಾನಿ, ಐತಿಹಾಸಿಕ ಹಾಗೂ ಜನರಿಂದ ಜನರ ನಡುವಿನ ಬಲವಾದ ಸಂಬಂಧಗಳ ಆಧಾರದಲ್ಲಿ ನಿರ್ಮಿತವಾಗಿರುವ ಭಾರತ-ಗಯಾನ ಪಾಲುದಾರಿಕೆಯನ್ನು ಇನ್ನಷ್ಟು ಬಲಪಡಿಸಲು ನಿರೀಕ್ಷಿಸುತ್ತಿರುವುದಾಗಿ ತಿಳಿಸಿದ್ದಾರೆ. ಈ ಸಂದೇಶಕ್ಕೆ ಪ್ರತಿಕ್ರಿಯಿಸಿರುವ ಗಯಾನ ಅಧ್ಯಕ್ಷ ಅಲಿ, ಭಾರತದೊಂದಿಗೆ ಸಹಕಾರವನ್ನು ಮುಂದುವರಿಸಲು ಉತ್ಸುಕತೆ ವ್ಯಕ್ತಪಡಿಸಿದ್ದಾರೆ. ಈ ಹಿಂದೆ ಇದ್ದ ಸೌಹಾರ್ದಪೂರ್ಣ ಹಾಗೂ ಬಲವಾದ ಸಂಬಂಧವನ್ನು ಇನ್ನಷ್ಟು ಉತ್ಕೃಷ್ಟಗೊಳಿಸಲು ಬದ್ಧರಿರುವುದಾಗಿ ಅವರು ಹೇಳಿದ್ದಾರೆ. ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಪ್ರಕಾರ, ಭಾರತ ಮತ್ತು ಗಯಾನ ನಡುವೆ ರಾಜತಾಂತ್ರಿಕ ಸಂಬಂಧಗಳು 1965ರಲ್ಲಿ ಜಾರ್ಜ್‌ಟೌನ್‌ನಲ್ಲಿ ಭಾರತದ ಆಯೋಗ ಸ್ಥಾಪನೆಯಿಂದ ಆರಂಭವಾಯಿತು. 1966ರ ಮೇ 26 ರಂದು ಗಯಾನ ಸ್ವಾತಂಯ ಪಡೆದ ನಂತರ, ಈ ಆಯೋಗವನ್ನು 1968ರಲ್ಲಿ ಹೈ ಕಮಿಷನ್ ಆಗಿ ನವೀಕರಿಸಲಾಯಿತು.

<><><><><><><><>

ಆಪರೇಷನ್ ಸಿಂಧೂರ್ ಭಾರತದ ತ್ವರಿತ, ನಿಖರ ಹಾಗೂ ನಿರ್ಣಾಯಕ ದಾಳಿಯ ಸಾಮರ್ಥ್ಯವನ್ನು ಜಾಗತಿಕ ಮಟ್ಟದಲ್ಲಿ ಪ್ರದರ್ಶಿಸಿದೆ ಎಂದು ವಾಯುಪಡೆಯ ಮುಖ್ಯಸ್ಥ, ಏರ್ ಚೀಫ್ ಮಾರ್ಷಲ್ ಅಮರ್ ಪ್ರೀತ್ ಸಿಂಗ್ ಹೇಳಿದ್ದಾರೆ. ಚೆನ್ನೈಯಲ್ಲಿನ ಅಧಿಕಾರಿಗಳ ತರಬೇತಿ ಅಕಾಡೆಮಿ - ಒಟಿಎಯಲ್ಲಿ ನಡೆದ ಪಾಸಿಂಗ್ ಔಟ್ ಪರೇಡ್ ವೇಳೆ ಮಾತನಾಡಿದ ಅವರು, ನೂತನವಾಗಿ ನೇಮಕಗೊಂಡ ಅಧಿಕಾರಿಗಳಿಗೆ ದೇಶ ಸೇವೆಯಲ್ಲಿ ಏಕತಾ ಭಾವನೆಯನ್ನು ಎತ್ತಿಹಿಡಿಯುವಂತೆ ಕರೆ ನೀಡಿದರು. ಈ ವೇಳೆ 130 ಪುರುಷ ಮತ್ತು 25 ಮಹಿಳಾ ಅಧಿಕಾರಿ ಕ್ಯಾಡೆಟ್‌ಗಳು ಭಾರತೀಯ ಸೇನೆಗೆ ಅಧಿಕೃತವಾಗಿ ನೇಮಕಗೊಂಡರು. ಜೊತೆಗೆ, ಒಟ್ಟು 9 ಮಿತ್ರರಾಷ್ಟ್ರಗಳಿಂದ 9 ಪುರುಷರು ಮತ್ತು 12 ಮಹಿಳೆಯರು ಸೇರಿದಂತೆ ಒಟ್ಟು 21 ವಿದೇಶಿ ಕ್ಯಾಡೆಟ್‌ಗಳೂ ಸಹ ತರಬೇತಿ ಪೂರ್ಣಗೊಳಿಸಿದರು. ವಾಯುಪಡೆಯ ಮುಖ್ಯಸ್ಥರು ಆಧುನಿಕ ಯುದ್ಧ ತಂತ್ರದ ಬದಲಾವಣೆಗಳ ಬಗ್ಗೆ ಮಾತನಾಡುತ್ತಾ, ಸಮಗ್ರ ಪ್ರತಿಕ್ರಿಯೆಯ ಅಗತ್ಯತೆಯನ್ನು ಒತ್ತಿ ಹೇಳಿದರು. ಆಪರೇಷನ್ ಸಿಂಧೂರ್‌ನಿಂದ ಕಲಿತ ಪಾಠಗಳು ಸೇನೆ, ನೌಕಾಪಡೆ, ವಾಯುಪಡೆ ಮತ್ತು ಇತರ ರಾಷ್ಟ್ರೀಯ ಭದ್ರತಾ ಸಂಸ್ಥೆಗಳ ನಡುವೆ ಸಮನ್ವಯ ಸಾಧ್ಯವಾಗಿಸಿವೆ ಎಂದು ಅವರು ಹೇಳಿದರು.ಅಧಿಕಾರಿಗಳಾಗುತ್ತಿರುವ ಕ್ಯಾಡೆಟ್‌ಗಳಿಗೆ ಅವರು ತಮ್ಮ ಪಾತ್ರವನ್ನು ಅರ್ಥಮಾಡಿಕೊಳ್ಳುವಂತೆ, ಹಾಗೂ ಇತರ ಸಹ ಅಧಿಕಾರಿಗಳೊಂದಿಗೆ ಸಹಕಾರದಿಂದ ಕಾರ್ಯನಿರ್ವಹಿಸಿ, ಸಶಸ್ತ್ರ ಪಡೆಗಳ ಸಾಮೂಹಿಕ ಗುರಿಯನ್ನು ಸಾಧಿಸಲು ಪ್ರಯತ್ನಿಸಬೇಕೆಂದು ಸಲಹೆ ನೀಡಿದರು. ಸಮಾರಂಭದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಕ್ಯಾಡೆಟ್‌ಗಳನ್ನು ಪುರಸ್ಕರಿಸಲಾಯಿತು.

<><><><><><><>

ಜಿಎಸ್‌ಟಿ ಲಾಭಗಳನ್ನು ನಾಗರಿಕರಿಗೆ ತಲುಪಿಸುವ ಪ್ರಕ್ರಿಯೆ ಮೇಲೆ ತಾವು ವೈಯಕ್ತಿಕ ನಿಗಾ ಇಡುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.ಸುದ್ದಿವಾಹಿನಿಯೊಂದರ ಸಂದರ್ಶನದಲ್ಲಿ ಅವರು, ದೇಶದಾದ್ಯಂತ ಜನರು ಜಿಎಸ್‌ಟಿ ಸುಧಾರಣೆಗಳನ್ನು ಸ್ವಾಗತಾರ್ಹ ಹೆಜ್ಜೆ ಎಂದು ಗುರುತಿಸಿದ್ದಾರೆ. ಆದರೆ ಈ ಲಾಭಗಳು ಪೂರಕವಾಗಿ ಜನರಿಗೆ ತಲುಪುತ್ತಿಲ್ಲವೆಂದರೆ, ಈ ಬಗ್ಗೆ ವರದಿ ಮಾಡಬೇಕು ಎಂದರು. ಹಲವು ಕೈಗಾರಿಕಾ ಕ್ಷೇತ್ರದ ಪ್ರತಿನಿಧಿಗಳು ಈಗಾಗಲೇ ಜಿಎಸ್‌ಟಿ ಲಾಭಗಳನ್ನು ಗ್ರಾಹಕರಿಗೆ ಪೂರೈಸಲು ಬದ್ಧತೆಯನ್ನು ವ್ಯಕ್ತಪಡಿಸಿದ್ದಾರೆ. ಜೊತೆಗೆ, ಜಿಎಸ್‌ಟಿ ಸುಧಾರಣೆಗಳನ್ನು ಅನುಷ್ಠಾನಗೊಳಿಸಲು ದೀರ್ಘ ಕೆಲಸದ ಸಮಯ ಹಾಗೂ ಅಧಿಕಾರಿ ಮಟ್ಟದ ಶ್ರಮ ಅಗತ್ಯವಾಯಿತು ಎಂದರು.

<><><><><><><>

ಇತ್ತೀಚೆಗೆ ಜಾರಿಗೆ ಬಂದ ಹೊಸ ಜಿಎಸ್‌ಟಿ ದರಗಳು ಕೃಷಿ ಕ್ಷೇತ್ರದಲ್ಲಿ ಮಹತ್ವಪೂರ್ಣ ಬದಲಾವಣೆಗಳನ್ನು ತರಲಿವೆ ಎಂದು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದ್ದಾರೆ.ಭೋಪಾಲಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃಷಿ ಉಪಕರಣಗಳ ಮೇಲೆ ಜಿಎಸ್‌ಟಿ ದರವನ್ನು ಶೇಕಡ 5 ಕ್ಕೆ ಇಳಿಸಲಾಗಿದೆ. ಇದರಿಂದ ಟ್ರಾಕ್ಟರ್ ಹಾರ್ವೆಸ್ಟರ್‌ಗಳ ಖರ್ಚು ಕಡಿಮೆಯಾಗಿದ್ದು, ರೈತರ ಲಾಭ ಹೆಚ್ಚಲಿದೆ. 9 ಲಕ್ಷದ ಟ್ರಾಕ್ಟರ್ ಮೇಲೆ 65 ಸಾವಿರ ರೂಪಾಯಿಯಷ್ಟು ಉಳಿತಾಯ ಸಾಧ್ಯವಾಗಲಿದೆ ಎಂದು ಹೇಳಿದರು. ಜೈವಿಕ ಕೀಟನಾಶಕಗಳು ಮತ್ತು ಸೂಕ್ಷ್ಮ ಪೋಷಕಾಂಶಗಳು ಜಿಎಸ್‌ಟಿ ಇಳಿಕೆಯಿಂದ ರಾಸಾಯನಿಕ ಉತ್ಪನ್ನಗಳಿಂದ ಜೈವಿಕ ಉತ್ಪನ್ನಗಳೆಡೆಗೆ ರೈತರನ್ನು ಸೆಳೆಯಲಿದೆ. ಹಾಲು ಮತ್ತು ಚೀಸ್ ಮೇಲೆ ಜಿಎಸ್‌ಟಿ ತೆಗೆಯಲಾಗಿದ್ದು, ಇದರಿಂದ ರೈತರು, ಪಶು ಪಾಲಕರು ಹಾಗೂ ಗ್ರಾಹಕರು ಪ್ರಯೋಜನ ಪಡೆಯಲಿದ್ದಾರೆ. ಪಶುಪಾಲನೆ, ಮೀನುಗಾರಿಕೆ, ಕೋಳಿ ಸಾಕಾಣಿಕೆ ಸೇರಿದಂತೆ ಇತರ ಕೃಷಿ ಆಧಾರಿತ ಕ್ಷೇತ್ರಗಳಿಗೂ ಇದು ನೆರವಾಗಲಿದೆ ಎಂದರು. ಸ್ವಯಂ ಸಹಾಯ ಸಂಘಗಳಲ್ಲಿ ತೊಡಗಿರುವ ಗ್ರಾಮೀಣ ಮಹಿಳೆಯರಿಗೆ, ಚರ್ಮೋತ್ಪನ್ನ, ಹಾಲು ಉತ್ಪನ್ನಗಳಲ್ಲಿ ಈ ಜಿಎಸ್‌ಟಿ ಸಡಿಲಿಕೆ ಆರ್ಥಿಕ ಶಕ್ತಿ ನೀಡಲಿದೆ. "ಲಖ್‌ಪತಿ ದಿದಿ"ಯಂತೆ ಹಲವಾರು ಮಹಿಳೆಯರು ಆದಾಯ ಹೆಚ್ಚಿಸಿಕೊಳ್ಳುವ ಅವಕಾಶ ಪಡೆಯಲಿದ್ದಾರೆ ಎಂದು ತಿಳಿಸಿದರು.

ಧ್ವನಿ : ಶಿವರಾಜ್ ಸಿಂಗ್ ಚೌಹಾಣ್ (16 ಸೆಕೆಂಡ್‌ಗಳು)

<><><><><><><>

ಬಿಹಾರದಲ್ಲಿ ನಡೆಯುತ್ತಿರುವ ಏಷ್ಯಾಕಪ್ ಹಾಕಿ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಪುರುಷರ ತಂಡ ಫೈನಲ್ ಪ್ರವೇಶಿಸಿದೆ. ರಾಜಗಿರ್‌ನಲ್ಲಿ ನಿನ್ನೆ ಸಂಜೆ ನಡೆದ ಸೂಪರ್ 4ರ ಕೊನೆಯ ಪಂದ್ಯದಲ್ಲಿ ಭಾರತ ತಂಡ ಚೀನಾ ವಿರುದ್ಧ 7–0 ಅಂತರದಿಂದ ಭರ್ಜರಿ ಗೆಲುವು ಸಾಧಿಸಿದೆ. ಈ ಗೆಲುವಿನೊಂದಿಗೆ ಭಾರತ ಸೂಪರ್ 4ರ ಅಗ್ರಸ್ಥಾನವನ್ನು ಭದ್ರಪಡಿಸಿಕೊಂಡಿದೆ. ನಿನ್ನೆ ನಡೆದ ಮತ್ತೊಂದು ಸೂಪರ್ 4ರ ಹಂತದ ಪಂದ್ಯದಲ್ಲಿ ದಕ್ಷಿಣ ಕೊರಿಯಾ 4–3 ಅಂಕಗಳಿಂದ ಮಲೇಶಿಯಾ ವಿರುದ್ಧ ಜಯ ಸಾಧಿಸಿತು. ಇಂದು ಸಂಜೆ 7:30ಕ್ಕೆ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಭಾರತ ಮತ್ತು ದಕ್ಷಿಣ ಕೊರಿಯಾ ತಂಡಗಳು ಮುಖಾಮುಖಿಯಾಗಲಿವೆ.

<><><><><><><>

ಇಂಗ್ಲೆಂಡ್‌ನ ಲಿವರ್ಪೂಲ್‌ನಲ್ಲಿ ನಡೆಯುತ್ತಿರುವ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ನಿಖತ್ ಜರೀನ್ ಗೆಲುವಿನ ನಗೆ ಬೀರಿದ್ದಾರೆ. ಮಹಿಳಾ 51 ಕೆಜಿ ವಿಭಾಗದಲ್ಲಿ ಭಾರತದ ಬಾಕ್ಸರ್ ನಿಖತ್ ಜರೀನ್ ಮೊದಲ ಸುತ್ತಿನ ಪಂದ್ಯದಲ್ಲಿ ಗೆಲುವು ಸಾಧಿಸಿದ್ದಾರೆ..

<><><><><><><><>

ಪಂಜಾಬ್‌ನಲ್ಲಿ ಉಂಟಾಗಿರುವ ಭಾರಿ ಪ್ರವಾಹ, ಸ್ವಲ್ಪಮಟ್ಟಿಗೆ ಸುಧಾರಿಸಿದ್ದರೂ, ಸಾವಿನ ಸಂಖ್ಯೆ ಏರಿತ್ತಲೆ ಇದೆ. ಪ್ರವಾಹದಿಂದ ಭಾರೀ ನಷ್ಟ ಅನುಭವಿಸುತ್ತಿರುವ ಪಂಜಾಬ್‌ನಲ್ಲಿ ಕಳೆದ 24 ಗಂಟೆಗಳಲ್ಲಿ ಅಮೃತಸರ ಮತ್ತು ರೂಪನಗರ ಜಿಲ್ಲೆಗಳಲ್ಲಿ ಇನ್ನೂ ಮೂರು ಮಂದಿ ಸಾವನ್ನಪ್ಪಿದ್ದು, ಒಟ್ಟು ಸಾವಿನ ಸಂಖ್ಯೆ 46ಕ್ಕೆ ಏರಿಕೆಯಾಗಿದೆ. ಪಠಾಣ್ಕೋಟ್ ಜಿಲ್ಲೆಯಲ್ಲಿ ಇನ್ನೂ ಮೂವರು ನಾಪತ್ತೆಯಾಗಿರುವ ವರದಿಯಾಗಿದೆ. ಭಾರತೀಯ ಸೇನೆ, ವಾಯುಪಡೆ, ಎನ್‌ಡಿಆರ್‌ಎಫ್ ಮತ್ತು ಬಿಎಸ್‌ಎಫ್ ವಿಶೇಷ ತಂಡಗಳ ಸಹಾಯದಿಂದ ಈಗವರೆಗೆ 23 ಸಾವಿರ ಜನರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ. ಗುರುದಾಸ್ಪುರ್, ಫಜಿಲ್ಕಾ, ಫಿರೋಜ್‌ಪುರ್, ಅಮೃತಸರ, ಕಪೂರ್‌ಥಲಾ ಮತ್ತು ತರ್ಣ್ತಾರನ್ ಜಿಲ್ಲೆಗಳು ಗ್ರಾಮಗಳು, ಅತಿ ಹೆಚ್ಚು ಹಾನಿಗೀಡಾಗಿವೆ. ಸ್ಥಳೀಯರು ಮತ್ತು ಸ್ವಯಂಸೇವಕ ಸಂಸ್ಥೆಗಳ ಸಹಾಯದಿಂದ ರಕ್ಷಣಾ ಮತ್ತು ಪರಿಹಾರ ಕಾರ್ಯಗಳು ನಡೆಯುತ್ತಿದ್ದು. ಪಂಜಾಬ್ ರಾಜ್ಯದ ಹಾಲು ಸಹಕಾರ ಸಂಸ್ಥೆ ಮಿಲ್ಕ್‌ಫೆಡ್ ಕೂಡ ಹಾಲು ಉತ್ಪಾದಕರಿಗೆ ಮತ್ತು ಪಶುಸಂಪತ್ತಿಗೆ ಸಹಾಯ ಮಾಡಲು ಎರಡು ಹಂತದ ವಿಶೇಷ ಕಾರ್ಯತಂತ್ರವನ್ನು ಜಾರಿಗೆ ತಂದಿದೆ.

<><><><><><><><>

ಅಮೆರಿಕದ ಜಾರ್ಜಿಯ ರಾಜ್ಯದ ಹುಂಡೈ ಕಾರ್ಖಾನೆ ಮೇಲೆ ವಲಸೆ ಅಧಿಕಾರಿಗಳು ದಾಳಿ ನಡೆಸಿ ಸುಮಾರು 500 ಜನರನ್ನು ಬಂಧಿಸಿದ್ದಾರೆ. ಕೊರಿಯನ್ ಕಂಪನಿಯು ವಿದ್ಯುತ್ ವಾಹನಗಳನ್ನು ತಯಾರಿಸಲು ನಿರ್ಮಿಸಿದ್ದ ಘಟಕದ ಸ್ಥಳದಿಂದ ಬಂಧಿಸಲ್ಪಟ್ಟವರಲ್ಲಿ ಹೆಚ್ಚಿನವರು ಕೊರಿಯನ್ ಪ್ರಜೆಗಳಾಗಿದ್ದಾರೆ. ಈ ದಾಳಿಯಲ್ಲಿ ಅಮೆರಿಕದ ವಲಸೆ ಅಧಿಕಾರಿಗಳು ನೂರಾರು ದಕ್ಷಿಣ ಕೊರಿಯಾ ಪ್ರಜೆಗಳನ್ನು ಬಂಧಿಸಿದ್ದಾರೆ.

<><><>